ಶ್ರೀ ಡಿ. ಮಂಜುನಾಥ್ —ಅದರ ಬಗ್ಗೆ ಮಾಹಿತಿ ಇಲ್ಲ; ಬೇರೆ ಪ್ರಶ್ನೆ ಕೇಳಿದರೆ ಹೇಳಬಹುದು.

ಅಥಣಿ ಪುರ ಸಭೆಗೆ ಚುನಾವಣೆಗಳನ್ನು ನಡೆಸುವುದು

೧೦೩. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ನಗರಾಭಿವೃದ್ಧಿ ಮತ್ತು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಬೆಳಗಾಂ ಜಿಲ್ಲೆಯಲ್ಲಿನ ಅಥಣಿ ನಗರದ ಪುರಸಭೆಯನ್ನು ರದ್ದು ಪಡಿಸುವುದು ನಿಜವೇ ?

(ಆ) ಹಾಗಿದ್ದಲ್ಲಿ ಯಾವಾಗ ಮತ್ತು ಇದರ ಕಾರಣಗಳೇನು ?

(ಇ) ಮೇಲಿನ ಪುರಸಭೆಗೆ ಚುನಾವಣೆಗಳನ್ನು ನಡೆಸಲು ಸರ್ಕಾರವು ತೆಗೆದು ಕೊಂಡಿರುವ ಕ್ರಮಗಳೇನು ?

ಶ್ರೀ ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮಂತ್ರಿಗಳು).—

(ಅ) ಹೌದು

(ಆ) ೧೯೬೭ ರಲ್ಲಿ ಕಡ್ಡಾಯ ಕರ್ತವ್ಯಗಳನ್ನು ನಿರ್ವಹಿಸುವುದರಲ್ಲಿ ವಿಫಲವಾದ್ದರಿಂದ

(ಇ) ಸೂಕ್ತ ಕಾಲದಲ್ಲಿ ಚುನಾವಣೆಗಳನ್ನು ನಡೆಸಲಾಗುವುದು.

ಶ್ರೀಮತಿ ಲೀಲಾವತಿ ಆರ್. ಪ್ರಸಾದ್.—ಮಾನ್ಯ ಅಧ್ಯಕ್ಷರೇ, ಸೂಕ್ತ ಕಾಲ ಎಂದರೆ ಎಷ್ಟು ಸಮಯದಲ್ಲಿ? ಕಳೆದ ೧೭ ವರ್ಷಗಳಿಂದ ಅದಕ್ಕೆ ಚುನಾವಣೆ ನಡೆದಿಲ್ಲ. ಸ್ಟೇ ತಂದಿದ್ದಾರೆ. ಅಲ್ಲಿರತಕ್ಕ ಸಿಬ್ಬಂದಿನೇ ಇದಕ್ಕೆ ಕಾರಣರಾಗಿದ್ದಾರೆ. ಅವರನ್ನು ಅಲ್ಲಿಂದ ಟ್ರಾನ್ಸ್‌ಫರ್ ಮಾಡುವುದಿಲ್ಲ. ಸೂಕ್ತ ಕಾಲ ಎಂದರೆ ಎಷ್ಟು ದಿವಸದಲ್ಲಿ ಮಾಡಬಹುದು ಎಂಬುದನ್ನು ಹೇಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಹೈಕೋರ್ಟಿನಲ್ಲಿರತಕ್ಕ ತಡೆಯಾಜ್ಞೆರದ್ದಾದ ತಕ್ಷಣ ಕಾರ್ಯಕ್ರಮ ಗಳನ್ನು ಕೈಗೊಳ್ಳುತ್ತೇವೆ.

ಶ್ರೀಮತಿ ಲೀಲಾವತಿ ಆರ್. ಪ್ರಸಾದ್.—ಸ್ಟೇ ಆರ್ಡರ್ ವೆಕೇಟ್ ಮಾಡಿಸಿ ಚುನಾವಣೆ ನಡೆಸಲು ಬೇಗ ಕ್ರಮ ತೆಗೆದುಕೊಳ್ಳಬೇಕು. ನಮ್ಮ ಜನತಾ ಸರಕಾರದಲ್ಲಿ ಯಾವ ಚುನಾವಣೆಯೂ ನಿಂತಿಲ್ಲ. ದಯವಿಟ್ಟು ಗೌರ್ನಮೆಂಟ್ ಲೆವೆಲ್‌ನಲ್ಲಿ ಸ್ಟೇ ವೆಕೇಟ್ ಮಾಡಿಸಿ ಚುನಾವಣೆ ಪಡೆಸಿಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಬಹಳ ಒಳ್ಳೆಯ ಸಲಹೆ ಕೊಟ್ಟಿದ್ದಾರೆ.

ಮುನ್ಸೀಫರು ಮತ್ತು ಇತರ ಅಧಿಕಾರಿಗಳ ವೇತನ ಕುರಿತು.

೩೯ (೩೨) ಶ್ರೀ ಆರ್. ವೆಂಕಟರಾಮಯ್ಯ (ಮಂಗಳವಾಗಲ್) ಮಾನ್ಯ ನಗರಾಭಿವೃದ್ಧಿ ಸಚಿವರು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೆ ?

(ಅ) ಮುನ್ಸೀಫರು ಮತ್ತು ಇತರ ನ್ಯಾಯಿಕ ಅಧಿಕಾರಿಗಳು ತಾವು ಈಗ ಪಡೆಯುತ್ತಿರುವ ವೇತನವು ಕಡಿಮೆ ಎಂಬ ಬಗ್ಗೆ ಯಾವುದೇ ಕೋರಿಕೆ ಅರ್ಜಿಯನ್ನು ಸಲ್ಲಿಸಿದ್ದಾರೆಯೇ;

(ಬಿ) ಅದನ್ನು ಸರಿಪಡಿಸಲು ಅವರು ಯಾವುದೇ ಕ್ರಮ ಕೈಗೊಂಡಿದ್ದಾರೆಯೇ;

ಶ್ರೀ ಎ. ಲಕ್ಷ್ಮೀಸಾಗರ್.—(ನಗರಾಭಿವೃದ್ಧಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು.)

(ಎ) ಇಲ್ಲ.

(ಬಿ) ಈ ಪ್ರಶ್ನೆಯೇ ಉದ್ಭವಿಸುವುದಿಲ್ಲ.